ಸಿ.ಸಿ.ನಂ.1239/2025

ಪಿ.ಡಬ್ಲೂಃ 2

ದಿನಾಂಕಃ 24/03/2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲು ಆರೋಪಿ ಪರ ವಕೀಲರಿಂದಃ**

1. ಆರೋಪಿ ನನಗೆ ನನ್ನ ಚಿಕ್ಕಮ್ಮನ ಮಗ. ಈ ಪ್ರಕರಣಕ್ಕೆ ಸಂಬಂಧಿಸಿದ ವ್ಯವಹಾರ ಆರೋಪಿ ಮತ್ತು ನನ್ನ ತಂದೆಯ ನಡುವೆ ಆಗಿರುತ್ತದೆ. ಆರೋಪಿ ವ್ಯವಹಾರದ ಉದ್ದೇಶಕ್ಕಾಗಿ ಸಾಲವನ್ನು ಪಡೆದುಕೊಂಡಿರುತ್ತಾರೆ. ಯಾವ ವ್ಯವಹಾರಕ್ಕೆ ಸಂಬಂಧಿಸಿದಂತೆ ಆರೋಪಿ ಸಾಲವನ್ನು ಪಡೆದುಕೊಂಡಿರುತ್ತಾರೆ ಎಂದು ಹೇಳಲು ನನಗೆ ಸರಿಯಾಗಿ ಗೊತ್ತಿಲ್ಲ. ನಾನು ಹೇಳುವ ಹಾಗೆ ಆರೋಪಿ ನನ್ನ ತಂದೆಯಿಂದ ವ್ಯವಹಾರದ ಉದ್ದೇಶಕ್ಕಾಗಿ ಸಾಲವನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸುಳ್ಳು.

2. ಆರೋಪಿಯ ಮನೆಗೆ ನಾವು ಹೋಗಿ ಸಾಲವನ್ನು ಕೊಟ್ಟಿರುತ್ತೇನೆ. ಆ ಸಮಯದಲ್ಲಿ ಪಿರ್ಯಾದುದಾರರ ಜೊತೆ ನಾನೂ ಕೂಡ ಆರೋಪಿಯ ಮನೆಗೆ ಹೋಗಿರುತ್ತೇನೆ. ನಾವು ಆರೋಪಿಯ ಮನೆಗೆ ಹೋದ ಸಮಯದಲ್ಲಿ ಆರೋಪಿ ಮತ್ತು ಆತನ ತಂದೆ-ತಾಯಿ ಇದ್ದರು. ಆರೋಪಿಗೆ ಹಣವನ್ನು ಕೊಟ್ಟ ಸಮಯದಲ್ಲಿ ಪಿರ್ಯಾದುದಾರರು ಆಸ್ತಿಗೆ ಸಂಬಂಧಿಸಿದ ದಾಖಲೆಗಳನ್ನು ಪಡೆದುಕೊಂಡಿರುವುದಿಲ್ಲ. ನಾನು ಮತ್ತು ಪಿರ್ಯಾದುದಾರರು ಒಂದೇ ಮನೆಯಲ್ಲಿ ವಾಸಿಸುತ್ತಿದ್ದೇವೆ ಎಂದರೆ ಸರಿ. ನನ್ನ ಮತ್ತು ಪಿರ್ಯಾದುದಾರರ ನಡುವೆ ಯಾವುದೇ ಮನಸ್ತಾಪ ಇರುವುದಿಲ್ಲ. ಆರೋಪಿಗೆ 500 ರೂ ಮುಖಬೆಲೆಯ ನೋಟುಗಳಿಂದ ಸಾಲವನ್ನು ಕೊಟ್ಟಿರುತ್ತಾರೆ. ಪಿರ್ಯಾದುದಾರರು ಯಾವ ಬ್ಯಾಂಕಿನಿಂದ ಹಣವನ್ನು ತಂದಿದ್ದರು ಎಂದು ಹೇಳಲು ನನಗೆ ಗೊತ್ತಿಲ್ಲ. ಆರೋಪಿ ಪಿರ್ಯಾದುದಾರರಿಂದ ಸಾಲವನ್ನು ಪಡೆದುಕೊಳ್ಳುವ ಸಮಯದಲ್ಲಿ ಯಾವುದೇ ಕೆಲಸಕ್ಕೆ ಹೋಗುತ್ತಿರಲಿಲ್ಲ ಎಂದರೆ ಸರಿ. ಸಾಮಾನ್ಯವಾಗಿ ಸಾಲವನ್ನು ಮರುಪಾವತಿ ಮಾಡುವ ಶಕ್ತಿ ಇರುವವರಿಗೆ ಮಾತ್ರ ಸಾಲವನ್ನು ಕೊಡಲಾಗುತ್ತದೆ ಎಂದರೆ ಸರಿ. ಆರೋಪಿಗೆ ಸಾಲವನ್ನು ಕೊಡುವಾಗ ಭದ್ರತೆಗಾಗಿ ಯಾವುದೇ ದಾಖಲೆಗಳನ್ನು ಮಾಡಿಕೊಂಡಿರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಆರೋಪಿ ಚೆಕ್ಕುಗಳನ್ನು ನೀಡಿರುತ್ತಾರೆ ಎಂದು ನುಡಿಯುತ್ತಾರೆ.

3. ಪಿರ್ಯಾದುದಾರರು ಮತ್ತು ಆರೋಪಿಯ ತಂದೆಯ ನಡುವೆ ಯಾವುದೇ ವ್ಯವಹಾರ ಇರುವುದಿಲ್ಲ. ಕಳೆದ 5-6 ವರ್ಷಗಳಿಂದ ಹಣದ ವ್ಯವಹಾರಕ್ಕೆ ಸಂಬಂಧಿಸಿದಂತೆ ನಮ್ಮ ಮತ್ತು ಆರೋಪಿಯ ಕುಟುಂಬದ ನಡುವೆ ಮನಸ್ತಾಪ ಇದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಕಳೆದ 2 ವರ್ಷಗಳಿಂದ ಮನಸ್ತಾಪ ಇದೆ ಎಂದು ನುಡಿಯುತ್ತಾರೆ.

4. ದಿನಾಂಕ 15.11.2022 ರಂದು ಪಿರ್ಯಾದುದಾರರು ಆರೋಪಿಗೆ ಸಾಲವನ್ನು ಕೊಟ್ಟಿರುತ್ತಾರೆ. ಸದರಿ ದಿನದಂದು ಆರೋಪಿ ಚೆಕ್ ನಂಬರ್ 841886 ಮತ್ತು 841888 ಚೆಕ್ಕನ್ನು ಪಿರ್ಯಾದುದಾರರಿಗೆ ಕೊಟ್ಟಿರುತ್ತಾರೆ. ನಿಪಿ–1 ಮತ್ತು 2 ಚೆಕ್ಕುಗಳು ಸುಮಾರು 10 ವರ್ಷದ ಹಳೆಯ ಚೆಕ್ಕುಗಳು ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಪಿರ್ಯಾದುದಾರರಿಗೆ ರೂ.10,00,000/– ಸಾಲವನ್ನು ಆರೋಪಿಗೆ ಕೊಡುವಷ್ಟು ಆರ್ಥಿಕ ಸಾಮರ್ಥ್ಯ ಇರುವುದಿಲ್ಲ ಎಂದರೆ ಸುಳ್ಳು. ಸುಮಾರು ವರ್ಷಗಳಿಂದ ನಮ್ಮ ಮತ್ತು ಆರೋಪಿಯ ಕುಟುಂಬದ ನಡುವೆ ಮನಸ್ತಾಪ ಇರುವ ಕಾರಣದಿಂದ ಆತನಿಗೆ ತೊಂದರೆ ಕೊಡುವ ಉದ್ದೇಶದಿಂದ ನಿಪಿ–1 ಮತ್ತು 2 ಚೆಕ್ಕನ್ನು ನಾವು ಸೃಷ್ಟಿಸಿ ಈ ದೂರನ್ನು ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ನನ್ನ ಪ್ರಮಾಣ ಪತ್ರದಲ್ಲಿ ತಿಳಿಸಿರುವ ವಿಷಯದ ಬಗ್ಗೆ ನನಗೆ ಗೊತ್ತಿದ್ದೆ. ನನ್ನ ಪ್ರಮಾಣ ಪತ್ರದಲ್ಲಿ ತಿಳಿಸಿರುವ ಎಲ್ಲಾ ವಿಷಯ ಸುಳ್ಳಿನಿಂದ ಕೂಡಿರುತ್ತೆದೆ ಎಂದರ ಸರಿಯಲ್ಲ. ಆರೋಪಿ ನಿರುದ್ಯೋಗಿ ಎಂಬ ವಿಷಯ ಗೊತ್ತಿದ್ದರೂ ಕೂಡ ಆತನಿಗೆ ತೊಂದರೆ ಕೊಡುವ ಉದ್ದೇಶದಿಂದ ನಾನು ಪಿರ್ಯಾದುದಾರರ ಜೊತೆ ಸೇರಿಕೊಂಡು ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ:</u> ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ.ಇದೆ.

(ಜಯಲಕ್ಷ್ಮೀ ಎನ್. ಬಿ)
ಪ್ರಧಾನ ಹಿರಿಯ ಸಿ.ಜೆ. ಮತ್ತು ಜೆಎಂಎಫ್‌ಸಿ
ಕೆಜಿಎಫ್